(ದಿ.09.09.2024 ರ ಆದೇಶದಂತೆ ಸಾಕ್ಷಿಯನ್ನು ಮುಂದುವರೆದ ಪಾಟೀ ಸವಾಲಿಗೆ ಕರೆಸಲಾಗಿದೆ.)

ದಿನಾಂಕಃ 20.01.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಜಿ.ಎ. ವಕೀಲರಿಂದಃ**

ಅಡಿಕೆ ವ್ಯಾಪಾರಕ್ಕಾಗಿ ಆರೋಪಿ ನನ್ನ ಬಳಿ ಹಣ ಪಡೆದಿದ್ದಾರೆ ಎಂದು ನನ್ನ ವಕೀಲರ ನೋಟಿಸ್ ನಲ್ಲಿ ಬರೆಸಿಲ್ಲ. ಆರೋಪಿಯು ಅಡಿಕೆ ವ್ಯಾಪಾರ ಮಾಡುತ್ತಾರೆ ಎಂದು ನನಗೆ 2018 ರಲ್ಲಿ ತಿಳಿಯಿತು. ಆರೋಪಿಯು ಎಷ್ಟು ಮೊತ್ತದ ವ್ಯವಹಾರ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿಯ ವಾರ್ಷಿಕ ಆದಾಯದ ಬಗ್ಗೆ ನಾನು ತಿಳಿದುಕೊಂಡಿಲ್ಲ. ನನ್ನ ಆದಾಯ ತೆರಿಗೆ ಪಾವತಿ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಾನು ಹೆಚ್ಚು ಹಣ ಪಡೆಯಬೇಕಾದರೆ ಬ್ಯಾಂಕಿನಿಂದ ಚೆಕ್ ಮೂಲಕ ಪಡೆಯುತ್ತೇನೆ. 2018 ರಲ್ಲಿ ನಾನು ಬ್ಯಾಂಕ್ ನಿಂದ ಹಣ ಪಡೆದಿಲ್ಲ. ನನಗೆ SBI ಮತ್ತು ಕೆನರಾ ಬ್ಯಾಂಕ್ ಗಳಲ್ಲಿ ಖಾತೆ ಇದೆ. ನಿಪಿ-1 ರ ಚೆಕ್ ನ್ನು ಕಳಸಾದ SBI ಬ್ಯಾಂಕ್ ಗೆ ಹಾಜರುಪಡಿಸಿದ್ದೆ. ನಿಪಿ-1 ರ ಚೆಕ್ "Crossed Cheque" ಅಲ್ಲ ಎಂದರೆ ಸರಿ. ಸದರಿ ಚೆಕ್ ನ್ನು ಹಾಜರುಪಡಿಸುವ ಮುನ್ನ ಅರೋಪಿಯ ಖಾತೆಯಲ್ಲಿ ಎಷ್ಟು ಹಣ ಇದೆ ಎಂದು ನಾನು ನೋಡಿಲ್ಲ. ನಿಪಿ-1 ರಲ್ಲಿನ ಚೆಕ್ ನಬರವಣಿಗೆಗಳ ಬಗ್ಗೆ ತಜ್ಞರ ವರದಿ ಪಡೆಯಲು ನನಗೆ ತೊಂದರೆ ಇಲ್ಲ.

ನನ್ನ ವಕೀಲರ ನೋಟೀಸು ಆರೊಪಿಗೆ ಯಾವ ದಿನಾಂಕ ತಲುಪಿದೆ ಎಂದು ನಾನು ತಿಳಿದುಕೊಂಡಿಲ್ಲ. ನಿಪಿ-1(ಎ) ಸಹಿ ಹಾಗೂ ನಿಪಿ-5 ರ ಸಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಭಾಷೆಯಲ್ಲಿ ಮಾತ್ರ ವ್ಯತ್ಯಾಸ ಇದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ದಾಖಲೆಗಳನ್ನು ಸಂಪೂರ್ಣವಾಗಿ ಮಾಹಿತಿ ಇಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಿಗೂ, ಆರೋಪಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ವಾರ್ಷಿಕ ಆದಾಯದ ಬಗ್ಗೆ ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆರೋಪಿಯನ್ನು ಹೊರತುಪಡಿಸಿ 2-3 ಜರನ ನಡುವೆ ನಾನು ಹಣದ ವ್ಯವಹಾರ ಮಾಡಿದ್ದೇನೆ. ಅರುಣ್ ತಾವರ್ ಎನ್ನುವವರ ವಿರುದ್ದ ರೂ.12,00,000/- ಕ್ಕೆ ಚೆಕ್ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿ. ನಾನು ನ್ಯಾಯಾಲಯದ ಮುಂದೆ ಹೇಳಿರುವ ವಿಚಾರಗಳು ಸರಿ ಇದೆ. ನಿಪಿ-1 ರಲ್ಲಿನ ಮೊತ್ತಕ್ಕೂ ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿರುವ ಮೊತ್ತಕ್ಕೂ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ನಾನು ಹೇಳಿದಂತೆ ಆರೋಪಿ ಯಾವುದೇ ಅಡಿಕೆ ವ್ಯಾಪಾರ ಮಾಡುವುದಿಲ್ಲ ಎಂದರೆ ಸರಿಯಲ್ಲ.

ನಾನು ಸಾಲಗಾರನಾಗಿದ್ದು ಆರೋಪಿಗೆ ಹಣ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ನನಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.